1923 (2010) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾನ್ಯ ಸಚಿವರು ಮತ್ತು ವಿಧಾನಸಭೆ ಹಾಗೂ ವಿಧಾನ ಪರಿಷತ್ ಸದಸ್ಯರ ಆಪ್ತ ಸಹಾಯಕರಿಗೆ ಕ.ರಾ.ರ.ಸಾ. ಸಂಸ್ಥೆ ಹಾಗೂ ಬೆಂ.ಮ.ಸಾ. ಸಂಸ್ಥೆಯ ವೋಲ್ವೋ ಬಸ್ಸುಗಳನ್ನೊಳಗೊಂಡಂತೆ ಎಲ್ಲ ಬಸ್ಸುಗಳಲ್ಲಿ ಉಚಿತವಾಗಿ ವಿಧಾನ ಸಭಾ ಹಾಗೂ ವಿಧಾನ ಪರಿಷತ್ ಕಾರ್ಯದರ್ಶಿಗಳು ನೀಡಿದ ಗುರುತಿನ ಚೀಟಿಯ ಮೇಲೆ ಪ್ರಯಾಣಿಸಲು ಸರ್ಕಾರದ ಮಟ್ಟದಲ್ಲಿ ಆದೇಶ ಹೊರಡಿಸಲು ಪ್ರಸ್ತಾವನೆಗಳೇನಾದರೂ ಇವೆಯೇ;

ಆ) ಇಲ್ಲವಾದಲ್ಲಿ ಆಪ್ತ ಸಹಾಯಕರಿಗೆ ಇಲ್ಲಿಗೆ ಬೇಕಾದಲ್ಲಿ ಪ್ರಯಾಣಿಸಲು ಅನುಕೂಲವಾಗುವಂತೆ ಸರ್ಕಾರವು ಆದೇಶವನ್ನು ಏಕೆ ಹೊರಡಿಸಬಾರದು?

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) :

ಅ ಮತ್ತು ಆ) ಯಾವುದೇ ಪ್ರಸ್ತಾವನೆಗಳು ಇರುವುದಿಲ್ಲ.

1924 (2011) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) :–ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾದಿಮಹಲ್/ಸಮುದಾಯಭವನವನ್ನು ನಿರ್ಮಿಸಲು ಸರ್ಕಾರವು ಕೇಂದ್ರ ಸರ್ಕಾರದಿಂದ ಅನುದಾನವನ್ನು ಪಡೆಯಲಾಗುತ್ತಿದೆಯೇ;

ಆ) ಹಾಗಿದ್ದಲ್ಲಿ ಪ್ರಸ್ತುತ ವರ್ಷದಲ್ಲಿ ಉಪಯೋಗಿಸಿಕೊಂಡ ಅನುದಾನ;

ಇ) ಕಳೆದ 2 ವರ್ಷದಲ್ಲಿ ಶಾದಿಮಹಲ್/ಸಮುದಾಯಭವನವನ್ನು ನಿರ್ಮಿಸಲು ರಾಜ್ಯ ಸರ್ಕಾರವು ನಿಗದಿಪಡಿಸಿದ ಅನುದಾನವೆಷ್ಟು ; (ಫಲಾನುಭವಿಗಳ ವಿವರ ನೀಡುವುದು)

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):

ಅ) ಇಲ್ಲ. ಇದು ರಾಜ್ಯವಲಯ ಯೋಜನೆಯಾಗಿದೆ.

ಆ) ಉದ್ಭವಿಸುವುದಿಲ್ಲ.

ಇ)

ವರ್ಷ	ಆಯವ್ಯಯ	ವೆಚ್ಚ	ಫಲಾನುಭವಿಗಳು
2005–06	325.00	257.00	75 ಸ್ವಯಂಸೇವಾ ಸಂಸ್ಥೆಗಳು
2006–07	550.00	550.00	77 ಸ್ವಯಂಸೇವಾ ಸಂಸ್ಥೆಗಳು